(ಇಂದು ದಿನಾಂಕಃ 05-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ವಿ.ಎಸ.ಡಿ ವಕೀಲರಿಂದ ಪ್ರತಿವಾದಿಯ ಪರಃ**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

2. ಈಗಾಗಲೇ ಗುರುತಿಸಿರುವ ನಿ.ಡಿ-1 ರಲ್ಲಿ ಸಾಕ್ಷಿಯ ಸಹಿಯನ್ನು ನಿ.ಡಿ-1 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ.ಎಸ ವಕೀಲರಿಂದ :**

1. ಇವತ್ತು ಬಾಬಯ್ಯ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ನಿ.ಡಿ-1 ರಲ್ಲಿ ಸಾಯಿನಾಥ ಸಹಿ ಮಾಡಿಲ್ಲ ಎಂದರೆ ಸರಿ. ಆದ್ದರಿಂದ ಸಾಯಿನಾಥರವರಿಗೆ ಸದರಿ ಖರೀದಿ ಪತ್ರ ಸಂಬಂಧ ಇಲ್ಲ ಎಂದರೆ ಸರಿ. ಬಾಬಯ್ಯರವರ ಮನೆಯ ಪೂರ್ತಿ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ನಮಗೆ ಮಾರಾಟ ಮಾಡುವ ಮೊದಲು ದಿಃ 06-04-2016 ರಂದು ಬಾಬಯ್ಯ ಶ್ರೀನಾಥರವರಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ನಾವು ಇಸಿ ನೊಡಿದ್ದೆವು ಅದರಲ್ಲಿ ಅವರ ಹೆಸರು ಇರಲಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ 188/1 ರ ಜಮೀನಿನ ಇಸಿ ನಾನು ನೋಡಿರುತ್ತೇನೆ. ಇಸಿಯಲ್ಲಿ ದಿಃ 06-04-2016 ರಂದು ಬಾಬಯ್ಯ ಸಾಯಿನಾಥವರಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದು ಬರೆದಿದೆ ಎಂದರೆ ಸರಿ. ಸಾಕ್ಷಿ ನಿ,ಪಿ-3 ರನ್ನು ನೋಡಿ ಅದರಲ್ಲಿ ಆ ರೀತಿ ಬರೆದಿದೆ ಎಂದು ಹೇಳುತ್ತಾರೆ. ಇಸಿಯಲ್ಲಿ ದಿಃ 06-04-2016 ರಂದು ಬಾಬಯ್ಯ ಶ್ರೀನಾಥರವರಿಗೆ ಕ್ರಯದ ಕರಾರು ಪತ್ರ ರದ್ದು ಮಾಡಿರುವ ಬಗ್ಗೆ ಬರೆದಿಲ್ಲ ಎಂದರೆ ಸರಿ. ಬಾಬಯ್ಯ ಕ್ರಯದ ಪತ್ರ ಮಾಡಿಕೊಡದೆ ಇದ್ದುದ್ದರಿಂದ ಸಾಯಿನಾಥರವರು ಅಸಲು ದಾವೆ ಸಂಖ್ಯೆ 18/2020 ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ 18/2020 ರಲ್ಲಿ ದಿಃ21-08-2021 ರಂದು ಕ್ರಯ

ಪತ್ರ ಮಾಡಿಕೊಡಬೇಕು ಎಂದು ಆದೇಶ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಆದೇಶದ ಪ್ರಕಾರ ಸಾಯಿನಾಥರವರು ದಿಃ30-09-2021 ರಂದು ಉಳಿದ ಹಣ ನ್ಯಾಯಾಲಯದಲ್ಲಿ ಜಮಾ ಮಾಡಿದರು ಎಂದರೆ ಸರಿ. ಬಾಬಯ್ಯ ಕ್ರಯದ ಪತ್ರ ಮಾಡಿಕೊಡದೆ ಇದ್ದುದ್ದರಿಂದ ಶ್ರೀನಾಥರವರು ಇ.ಪಿ 9/2022 ಸಲ್ಲಿಸಿದ್ದರು ಎಂದರೆ ಸರಿ. ಸಾಯಿನಾಥರವರಿಗೆ ಗೊತ್ತಿಲ್ಲದಂತೆ ಸರ್ವೆ ಆದ ನಂತರ ನಾನು ನೊಂದಣಿ ಮಾಡಿಸಿಕೊಂಡೆ ಎಂದರೆ ಸರಿಯಲ್ಲ. ಈ ಕೇಸನಡದ ಬಗ್ಗೆ ನಮಗೆ ಗೊತ್ತಿದ್ದರಿಂದ ಈ ದಿನ ನಾವು ಬಾಬಯ್ಯರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.